ಅವಕಾಶದ ಅನುಭವ ಪಡೆಯುತ್ತಿರುವುದು ಕೇಳಿ ಮಹಾದಾನಂದವಾಯಿತು. ಇಲ್ಲದಿದ್ರೆ ನಮ್ಮ ಗಂಡಂದಿರಿಗೆ ಮಸಾಜ್ ಮಾಡಿಸಿಕೊಳ್ಳಲು ಸುತಾರಾಂ ಒಪ್ಪುತಿರಲಿಲ್ಲವೆನ್ನಿ. ಹೇಗೂ ಇಬ್ಬರೂ ಹೋಗುವುದಿದೆ ಎಂದ ಮೇಲೆ ನಮ್ಮ ಉತ್ಸಾಹ ದ್ವಿಗುಣಗೊಂಡಿತು.

ನಾವು ತಂಗಿದ ಹೋಟೇಲ್ ಸಮೀಪ ಯಾವ ಮಸಾಜ್ ಪಾರ್ಲರ್ ಇದೆ, ಬೆಲೆ, ಅದರ ಗುಣಮಟ್ಟ ಇವುಗಳ ಬಗ್ಗೆ ಚರ್ಚೆ ಮಾಡುತ್ತ ಬ್ಯಾಂಕಾಂಕ್ ಪಟ್ಟಣದ ಇತರ ಪ್ರವಾಸಿ ತಾಣಗಳು ನೋಡುವಾಗಲೂ ಮಸಾಜ್‌ನದೇ ಚರ್ಚೆ ಇರುತಿತ್ತೆನ್ನಿ.

ಅವತ್ತಿನ ಪ್ರವಾಸ ಮುಗಿಸಿ ಸಂಜೆ ಹೋಟೇಲ್‌ಗೆ ಬಂದು ಅಲ್ಲೇ ಪಕ್ಕದಲ್ಲಿದ್ದ ಮಸಾಜ್ ಪಾರ್ಲರ್‌ಗೆ ಹೋದೆವು. ಹೋಗುವುದಕ್ಕಿಂತ ಮೊದಲು ನಮ್ಮ ಮಹಿಳಾ ಟೂರ್ ಗೈಡ್ ಅನ್ನು ಈ ಪಾರ್ಲರ್‌ಗಳ ಬಗ್ಗೆ ಮತ್ತು ಅದರೊಳಗೆ ಏನೇನು ನಡೆಯುತ್ತೆ ಎಂಬುದರ ಬಗ್ಗೆ ಕೂಲಂಕಷವಾಗಿ ವಿಚಾರಿಸಿದೆವೆನ್ನಿ. ಇಷ್ಟು ಅನುಮಾನ ಇದ್ರೆ ಯಾಕೆ ಹೋಗಬೇಕಾಗಿತ್ತು ಅಂತಿರಾ. ಮಸಾಜ್ ಮಾಡ್ಸಿಕೊಳ್ಳದೆ ವಾಪಸ್ ನಮ್ಮ ದೇಶಕ್ಕೆ ಹೋದ್ರೆ ಮ ಯಾ ರ್ ದೆ



ಇರುತ್ತ? ಗಂಡಸರಿಗೆ ಹೋಗಲು ಬಿಡದೆ ನಾವು ಅವರೊಂದಿಗೆ ಹೋದೆವು. ಅವರಿಗೆ ನಮ್ಮನ್ನು ಕರೆದುಕೊಂಡು ಹೋಗಲು ಮನಸ್ಸಿತ್ತೊ ಇಲ್ವೋ. ಅದು ಅವರ ಸಮಸ್ಯೆ, ನಮಗೂ ಮಸಾಜ್ ಮಾಡ್ಸಿಕೊಳ್ಳೊ ಆಸೆ ಇರಲ್ವ? ಅಂತೂ ನಮ್ಮ ದಿಬ್ಬಣ ಮಸಾಜ್ ಮನೆಯತ್ತ ನಡೆಯಿತು.

ಒಟ್ಟು ಹತ್ತು ಜನರನ್ನು ನೋಡಿ ಮಸಾಜ್ ಮನೆಯವರಿಗೆ ಸಂಭ್ರಮವೋ ಸಂಭ್ರಮ. ನಮ್ಮನ್ನು ಸ್ವಾಗತಿಸಿ ಕುಡಿಯಲು ರುಚಿಯಾದ ಅದಾವುದೋ ಪಾನೀಯ ಕೊಟ್ಟರು. ನಮ್ಮ ದೃಷ್ಟಿ ಅವರ ವಯಸ್ಸು, ಅಲ್ಲ ಅಲ್ಲ ಅವರ ಉಡುಗೆ ತೊಡುಗೆ ಕಡೆ ಹರಿಯಿತು. ಲಂಗದಂತೆ ಸುತ್ತಿದ ಒಂದು ವಸ್ತ್ರ ಮತ್ತು ತುಂಬು ತೋಳಿನ ಬ್ಲೌಸ್ ತೊಟ್ಟು ಚಿಕ್ಕ ಚಿಕ್ಕ ಕಣ್ಣು ತಿರುಗಿಸುತ್ತ ಇಲಿಗಳಂತೆ ಚಿವ್ ಚಿವ್ ಎನ್ನುತ್ತ ಮುದ್ದಾಗಿ ಓಡಾಡುತಿದ್ದರು. ನಮ್ಮ ಗಂಡಸರೆಲ್ಲ ಮಸಾಜ್ ರೇಟ್ ಫಿಕ್ಸ್ ಮಾಡಲು ಸ್ವಲ್ಪ ಚೌಕಾಶಿ ಮಾಡಿದರು. ಒಬ್ಬರ ಭಾಷೆ ಒಬ್ಬರಿಗೆ ಬಾರದು, ಇಬ್ಬರದೂ ಹರಕು ಮುರಕು ಇಂಗ್ಲಿಷ್. ಅಂತೂ ಚೌಕಾಶಿ ಮಾಡಿ ಹಣ ಕೊಟ್ಟು ಎಲ್ಲರೂ ಮಾಲೀಶ್ ಮಾಡ್ಸಿಕೊಳ್ಳಲು ತಯಾರಾದೆವು.

ಈಗ ಬಂತು ಫಜೀತಿ, ಅಲ್ಲಿ ಗಂಡಸರಿಗೆ ಬೇರೆ ರೂಮ್, ಹೆಣ್ಣುಮಕ್ಕಳಿಗೆ ಬೇರೆ ರೂಮ್ ಆದ್ರೆ ಮಸಾಜ್ ಮಾಡೋರು ಮಾತ್ರ ಹೆಣ್ಣುಮಕ್ಳೆ. ಅದ್ಕೆ ನಮ್ಮ ಗಂಡಸರು ನಿರಾತಂಕದಿಂದ ನಾವು ಬೆನ್ನುಬಿದ್ರು ಬಿಡಿಸಿಕೊಳ್ಳದೆ ಬರ್ಲಿ ಎಂದು ಸುಮ್ನಿದ್ರೇನೋ.. ನಾವು ಮಾತ್ರ ನಮ್ಮ ಗಂಡಂದಿರು ಬೇರೆ ರೂಮ್‌ನಲ್ಲಿ ಪರ ಹೆಂಗಸಿನ ಕೈಲಿ ಮಸಾಜ್ ಮಾಡಿಸಲು ತಕರಾರು ತೆಗೆದೆವು. ಪತಿ ಪತ್ನಿಗೆ ಒಂದೇ ಕಡೆ ಮಸಾಜ್‌ಗೆ ಅವಕಾಶ ಕೊಡ್ಲಿ ಎಂಬುದು ನಮ್ಮ ವಾದ. ಮತ್ತೆ ಪಾರ್ಲರ್ ಯುವತಿಯರು ಚಿಲಿಪಿಲಿ ಎಂದು ಉಲಿಯುತ್ತ ಕಣ್ಣು ಮೂಗು ತಿರುಗಿಸುತ್ತ ತಮ್ಮ ಅಸಮಾಧಾನ ಸೂಚಿಸತೊಡಗಿದರು. ಆ ಅಸಮಾಧಾನ ಗಂಡಸರ ಮುಖದ ಮೇಲೂ ಕಾಣುತಿತ್ತು. ಏನೇ ಆದರೂ ಪತಿ ಪತ್ನಿಯರಿಬ್ಬರಿಗೂ ಒಂದೇ ಕೋಣೆಯಲ್ಲಿ ಮಸಾಜ್ ಮಾಡಲು ಅವರು ಒಪ್ಪಲೇ ಇಲ್ಲ. ಹಣ ಕಟ್ಟಿಯಾಗಿತ್ತು, ಏನಾದರೂ ಮಾತಾಡಿದ್ರೆ ಬಾಂಬ್ ಸಿಡಿಯುತ್ತೆ ಎಂದು ಎಲ್ಲಾ ಗಂಡಸರು ಗಪ್ ಚಿಪ್ ನಿಂತಿದ್ರು. ಕೊನೆಗೆ ನಾವೇ ಒಪ್ಪಿದೆವೆನ್ನಿ, ಇಲ್ಲೇ ಪಕ್ಕದಲ್ಲೇ ಇರುತ್ತೇವಲ್ಲ ಎಂದು ಸಮಾಧಾನ ಮಾಡಿಕೊಂಡು ಒಪ್ಪಿದ್ದೇ ತಡ ಗಂಡಸರೆಲ್ಲ ಪುಟು ಪುಟು ಎಂದು ಯಾವಾಗ ಜಾಗ ಖಾಲಿ ಮಾಡಿದ್ರೊ. ಯಾರಿಗೆ ಯಾರು ಮಸಾಜ್ ಮಾಡ್ತಾರೋ ಎಂದು ನೋಡಿದ್ರೆ ಎಲ್ಲ ಲಲನಾಮಣಿಗಳು ಅವಳಿ ಜವಳಿಗಳಂತೆ ಥೇಟ್ ಒಂದೇ ರೂಪ. ಒಂದೇ ಎತ್ತರ, ಹೆಚ್ಚು ಕಮ್ಮಿ ಒಂದೇ ಮುಖಚಹರೆ. ಅಷ್ಟರಲ್ಲಿ ಎಲ್ಲಾ ಗಂಡಸರು ಮಾಯವಾಗಿ ತಮ್ಮ ಸ್ಥಳ ಸೇರಿಕೊಂಡಿದ್ರು.

ನಾವು ಕಾಲೆಳೆಯುತ್ತ ನಮ್ಮ ಸ್ಥಳಕ್ಕೆ ಬಂದೆವು. ಒಂದು ಮಂಚ, ಸುತ್ತಲೂ ಪರದೆ ಎಲ್ಲರೂ ಪ್ರತ್ಯಕ್ಷ. ಸುತ್ತಲೂ ಪರದೆ ಎಳೆದರೆ ಅಲ್ಲಿ ಇಬ್ಬರೇ. ನಮ್ಮ ಹೆಂಗಳೆಯರಿಗೆ ಅದಾಗಲೇ ಬಿಪಿ ಏರುತಿತ್ತು. ಗಂಡಂದಿರನ್ನು ಇಲ್ಲಿಗೆ ಕರಕೊಂಡು ಬರ್ಲೆಬಾರದಿತ್ತು ಎಂದು ಹಲುಬತೊಡಗಿದರು. ನಮಗೆ ಮೈತುಂಬಾ ಉಡಲು ಬಟ್ಟೆ ಕೊಟ್ಟು ನಿರಾಳವಾಗಿ ಮಲಗಲು ಹೇಳಿದರು. ರಿಲ್ಯಾಕ್ಸ್ ಎಂದು ರಾಗವಾಗಿ ಹೇಳುತ್ತ ಮೊದಲು ಕಾಲನ್ನು ಅಮುಕತೊಡಗಿದರು. ಲಲನೆಯರು ತಮ್ಮ ಗಂಡಂದಿರಿಗೆ ರಿಲ್ಯಾಕ್ಸ್ ಮಾಡುವುದನ್ನು ಊಹಿಸಿಕೊಂಡ ನಮ್ಮ ಮಹಿಳಾಮಣಿಗಳಿಗೆಲ್ಲ ಮೈ ಎಲ್ಲಾ ಕಡಿತ, ಮಲಗಲೂ ಆಗದೆ ಏಳಲೂ ಆಗದೆ ಮೈಯಲ್ಲಿ ಇರುವೆ ಹೊಕ್ಕಿದವರ ಹಾಗೆ ಒದ್ದಾಡುವಾಗ ಪಾರ್ಲರ್ ಲಲನಾಮಣಿಯ ರಿಲ್ಯಾಕ್ಸ್ ಎಂಬ ಶಬ್ದ ಮತ್ತಷ್ಟು ಉರಿಸತೊಡಗಿತು. ಅಲ್ಲೇ ಅಕ್ಕಪಕ್ಕ ಇದ್ದ ನಾವೆಲ್ಲ ಮಾತಾಡಿಕೊಂಡು, ಅಲ್ರಿ ಒಬ್ಬರೂ ಗಂಡಸ್ರ ಶಬ್ದನೆ ಇಲ್ವಲ್ರಿ... ಇಲ್ಲೇ ಇದ್ದಾರೋ ಬ್ಯಾರೆ ಪಾರ್ಲರಕ್ಕ ಹೋದ್ರೋ.. ಏ, ಬ್ಯಾರೆ ಎಲ್ಲಿ ಹೋಗತಾರ, ದುಡ್ಡ ಇಲ್ಲೆ ಕೊಟ್ರಲ ಎಲ್ಲರದೂ ಕೂಡ್ಸಿ... ಈ ಹೆಂಗಸ್ರು ಕೈಕಾಲೆಲ್ಲ ಒತ್ತತಿದ್ದಾರೀ.. ಹೌದ್ ಮತ್ತ ಮಸಾಜ್ ಅಂದ್ರ ಏನ್ ಅಂತ್ ತಿಳಕೊಂಡಿರಿ, ಮೈ ಹಗುರ ಮಾಡೋದು.

'ಏ, ಹಂಗಲ್ರಿ, ಬ್ಯಾರೆ ಹೆಣ್ಣಮಕ್ಳು ಹಿಂಗ... ಮಾಡೋದಂದ್ರ...'

ಇದು ಅವರ ಕೆಲಸರೀ, ಹೊಟ್ಟೆಪಾಡು, ಅವರು ಅವರ ಮಿತಿಯೊಳಗ ಮಾಡ್ತಾರ.. ಸುಮ್ನ ಆತಂಕ ಮಾಡ್ಕೋಬ್ಯಾಡ್ರಿ, ಇದು ಒಂದು ಅನುಭವ ಅಷ್ಟ ಎಂದು ಸಮಾಧಾನಿಸಲು ಪ್ರಯತ್ನಿಸಿದೆ. ನನ್ನ ಸಮಾಧಾನದ ಮಾತುಗಳು ಪರಿಣಾಮ ಬೀರಿದಂತೆ ಕಾಣ್ಲೆ ಇಲ್ಲ. ಅಷ್ಟರಲ್ಲಿ ಒಬ್ಳು ಸುಮ್ನಿರದೆ ರೀ... ಎಂದು ಜೋರಾಗಿ ಕೂಗಿದಳು. ಆ ಕಡೆಯಿಂದ ಯಾವ ಶಬ್ದವೂ ಇಲ್ಲ. ಅವರೆಲ್ಲ ಮಸಾಜ್‌ನ ಅನುಭೂತಿ ಪಡೆಯುತಿದ್ರು. ನಮ್ಮಂಗ್ ಅವ್ರೇನೂ ಆತಂಕಪಟ್ಟುಕೊಳ್ಳುವ ವಿಷಯ ಇರಲಿಲ್ಲ ಅಲ್ವ. ತನ್ನ ಕೂಗಿಗೆ ಪತಿಯಿಂದ ಉತ್ತರ ಬರದಿದ್ದಕ್ಕೆ ಸತಿ ದಿಗ್ಗನೆ ಎದ್ದಳು.

ಮಸಾಜ್ ಮಾಡುವವಳು ಅವಳ ಎರಡೂ ಕಾಲಿನ ಮೇಲೆ ಮಂಡಿಯೂರಿ ಮೊಣಕಾಲನ್ನು ಮಸಾಜ್ ಮಾಡುತ್ತಿದ್ದಳು. ಇವಳು ಎದ್ದ ರಭಸಕ್ಕೆ ಮಸಾಜ್ ಮಾಡುತ್ತಿರುವವಳು ಹಿಂದಕ್ಕೆ ನೆಗೆದು ಬಿದ್ದಳು. ಮಂಡಿಯನ್ನು ಗಟ್ಟಿಯಾಗಿ ಹಿಡಿದಿದ್ದರಿಂದ ಇವಳು ಎದ್ದ ರಭಸಕ್ಕೆ ಮೊಣಕಾಲಿನಲ್ಲಿ ಕಳಕ್ ಎಂದು ನೋವಾಯಿತು. ನೋವಿನಿಂದ ಸಣ್ಣಗೆ ಚೀರಿದಾಗ ನಾವು ಅಕ್ಕಪಕ್ಕದಲ್ಲಿದ್ದವ್ರೆಲ್ಲ ಎದ್ದು ಅವಳ ಮಂಚದತ್ತ ಓಡಿದೆವು. ಪಾಪ ಮಸಾಜ್ ಮಾಡುವವಳು ಸಪ್ಪೆ ಮುಖ ಮಾಡಿಕೊಂಡು ನಿಂತಿದ್ದಳು. ಇವಳು ನೋವಿನಿಂದ ಮುಲುಗುತಿದ್ದಳು. ಇಷ್ಟಾದರೂ ಗಂಡಸರಿದ್ದ ಕಡೆಯಿಂದ ಒಂದೇ ಒಂದು ಶಬ್ದವೂ ಇಲ್ಲ. ಹೋಗಿ ನೋಡೋಣವೆಂದು ನನಗೂ ಅನಿಸಿತ್ತು. ಆದ್ರೆ ಸ್ವಾಭಿಮಾನ ಬಿಡಲಿಲ್ಲ. ಹೋಗಿ ನೋಡಿ ಅನುಮಾನಗೇಡಿ ಅಂತ ಯಾಕ ಅನ್ನೋಬೇಕು, ಅವರೇನಾದ್ರೂ ನಮಗ ಬಂದು ನೋಡತಿದ್ದಾರ, ಎಷ್ಟ ಆರಾಮ ಮಸಾಜ್ ಮಾಡಸ್ಗೋತಿದ್ದಾರ ನೋಡ್ರಿ. ಸುಮ್ನ ನಾವು ಆತಂಕ ಪಡೋದು